## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಶ್ವ ಬ್ಯಾಂಕ್ ನೆರವಿನ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ" (KUWSMP) (ನಿರಂತರ 24x7 ನೀರು ಸರಬರಾಜು) ಯನ್ನು ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ನಗರಗಳಲ್ಲಿ ಅನುಷ್ಠಾನಗೊಳಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂ. ನಅಇ 26 ಪಿಆರ್‌ಜೆ 2003, ದಿನಾಂಕ:07.02.2004.
2. ಸರ್ಕಾರದ ಆದೇಶ ಸಂಖ್ಯೆ: ನಅಇ 81 ಪಿಆರ್‌ಜೆ 2008, ದಿನಾಂಕ:06.10.2008.
3. ಸರ್ಕಾರದ ಆದೇಶ ಸಂಖ್ಯೆ: ನಅಇ 244 ಪಿಆರ್‌ಜೆ 2013, ಬೆಂಗಳೂರು ದಿನಾಂಕ:07.11.2013.
4. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ. ರವರ ದಿನಾಂಕ:31-08-2018ರ ಪ್ರಸ್ತಾವನೆ.

K.U.I.D.F.C. No. 7701 Date 25/10

JM (PF) / TM (KUWS.MP)

******

**ಪ್ರಸ್ತಾವನೆ:**

ಮೇಲೆ ಓದಲಾದ (2) ರ ಆದೇಶದನ್ವಯ, ಬೆಳಗಾವಿ, ಕಲಬುರ್ಗಿ ಮತ್ತು ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಪ್ರಾತ್ಯಕ್ಷಿಕ ವಲಯಗಳಲ್ಲಿ ಅನುಷ್ಠಾನಗೊಂಡಿರುವ ನಿರಂತರ ನೀರು (24/7) ಸರಬರಾಜು ಯೋಜನೆಯ ಯಶಸ್ಸನ್ನು ಆಧರಿಸಿ, ಜನರ ಬೇಡಿಕೆ ಮತ್ತು ಈ ಎಲ್ಲಾ 3 ಮಹಾನಗರ ಪಾಲಿಕೆಗಳು ಅನುಮೋದಿಸಿರುವ ನಿರ್ಣಯದಂತೆ, ವಿಶ್ವ ಬ್ಯಾಂಕ್ ನೆರವಿನ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ" ಯಡಿ 3 ಮಹಾ ನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಪ್ರದೇಶಗಳಿಗೆ ವಿಸ್ತರಿಸಲು ಮೇಲೆ ಓದಲಾದ (3)ರ ಆದೇಶದಲ್ಲಿ ಸರ್ಕಾರವು ಅನುಮೋದನೆ ನೀಡಿರುತ್ತದೆ. ಯೋಜನೆಯ ಉದ್ದೇಶ 3 ಯೋಜನಾ ನಗರಗಳ ಎಲ್ಲಾ ಪ್ರದೇಶಗಳಿಗೆ ನಿರಂತರ ನೀರು ಸರಬರಾಜು (24/7) ವ್ಯವಸ್ಥೆಯನ್ನು ವಿಸ್ತರಿಸುವುದರ ಜೊತೆಗೆ ವ್ಯವಸ್ಥೆಯನ್ನು ಉತ್ತಮ ಪಡಿಸುವುದು ಮತ್ತು ಸುಧಾರಣೆಗಳನ್ನು ಉತ್ತೇಜಿಸುವುದಾಗಿರುತ್ತದೆ.

ಮುಂದುವರೆದು, 2041ರವರೆಗೆ ವೃದ್ಧಿಯಾಗುವ ಜನಸಂಖ್ಯೆಗೆ ಅನುಗುಣವಾಗಿ ವಿವರವಾದ ಯೋಜನಾ ವರದಿಯನ್ನು ಪ್ರತಿಷ್ಠಿತ ಸಮಾಲೋಚಕರ ಮೂಲಕ ಯೋಜನಾ ನಗರಗಳೊಂದಿಗೆ ಕೆ.ಯು.ಡಬ್ಲ್ಯೂ.ಎಸ್&ಡಿ.ಬಿ ಮತ್ತು ಕೆ.ಯು.ಐ.ಡಿ.ಎಫ್.ಸಿ ಯೊಂದಿಗೆ ಸಮಾಲೋಚಿಸಿ ತಯಾರಿಸಲಾಗಿದೆ. ಯೋಜನೆಯನ್ನು ಹಂತಗಳಲ್ಲಿ (ಮೊದಲನೇ ಹಂತದಲ್ಲಿ 2026 ರವರೆಗೆ ಬೆಳವಣಿಗೆಯಾಗುವ ಜನಸಂಖ್ಯೆಯ ಬೇಡಿಕೆಗೆ ಅನುಗುಣವಾಗಿ, ಎರಡನೇ ಹಂತದಲ್ಲಿ 2041ರ ವರೆಗೆ ಬೆಳವಣಿಗೆಯಾಗುವ ಜನಸಂಖ್ಯೆಯ ಬೇಡಿಕೆಗೆ ಅನುಗುಣವಾಗಿ), ಅನುಷ್ಠಾನಗೊಳಸಲು ಪ್ರಸ್ತಾಪಿಸಲಾಗಿದೆ. ಮೂರು ನಗರಗಳ ಪ್ರಸ್ತಾವಿತ ಯೋಜನಾ ಮೊತ್ತ ಈ ಕೆಳಕಂಡಂತಿರುತ್ತದೆ:



Scanned with CamScanner

(ರೂ. ಕೋಟಿಗಳಲ್ಲಿ)

| ಕ್ರ ಸಂ | ನಗರ | ಹಂತ 1 | ಹಂತ 2 | ಒಟ್ಟು |
|---|---|---|---|---|
| 1. | ಹುಬ್ಬಳ್ಳಿ-ಧಾರವಾಡ | 763 | 383 | 1146 |
| 2. | ಬೆಳಗಾವಿ | 427 | 236 | 663 |
| 3. | ಕಲಬುರಗಿ | 489 | 146 | 635 |
| 4. | ಯೋಜನಾ ನಿರ್ವಹಣೆ | 130 | 0 | 130 |
| | ಒಟ್ಟು | 1809 | 765 | 2574 |

ಹಣಕಾಸಿನ ಮಾದರಿ:

| ಕ್ರ ಸಂ | ಫಂಡಿಂಗ್ ಏಜೆನ್ಸಿ | ಹಂತ-I | | | ಹಂತ-II | | |
|---|---|---|---|---|---|---|---|
| | | ಯುಎಸ್ ಡಾಲರ್ ಮಿಲಿಯನ್ | ರೂ. ಕೋಟಿಗಳಲ್ಲಿ | % | ಯುಎಸ್ ಡಾಲರ್ ಮಿಲಿಯನ್ | ರೂ. ಕೋಟಿಗಳಲ್ಲಿ | % |
| 1 | ವಿಶ್ವ ಬ್ಯಾಂಕ್ | 187 | 1209 | 67 | 0 | 0 | 0 |
| 2 | ರಾಜ್ಯದ ಪಾಲು | 20 | 130 | 7 | 0 | 0 | 0 |
| 3 | ಸ್ಥಳೀಯ ಸಂಸ್ಥೆ ಪಾಲು | 72 | 470 | 26 | 118 | 765 | 100 |
| | ಒಟ್ಟು | 279 | 1809 | 100 | 118 | 765 | 100 |

ಈ ಯೋಜನೆಗೆ ವಿಶ್ವ ಬ್ಯಾಂಕ್ $100 ಮಿಲಿಯನ್ ಡಾಲರ್‌ಗಳ ಸಾಲದ ನೆರವು ನೀಡಿರುತ್ತದೆ. ಮೇಲೆ ಓದಲಾದ (3) ರ ಆದೇಶದನ್ವಯ ಯೋಜನೆಯ ಹಣಕಾಸಿನ ಹಂಚಿಕೆ ವಿಧಾನದಂತೆ ವಿಶ್ವಬ್ಯಾಂಕ್‌ನ ಸಾಲ ಶೇ.67%, ರಾಜ್ಯ ಸರ್ಕಾರದ ಪಾಲು ಶೇ. 7% ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪಾಲು ಶೇ.26% ಒಟ್ಟು ರೂ.1809 ಕೋಟಿಗಳ ಅಂದಾಜು ಮೊತ್ತಕ್ಕೆ ಯೋಜನೆಗೆ ಅನುಮೋದನೆ ನೀಡಿರುತ್ತದೆ.

ಮೂರು ಯೋಜನಾ ನಗರಗಳಲ್ಲಿ ಯೋಜನೆಯ ಅನುಷ್ಠಾನಕ್ಕೆ ಪೂರ್ವಾರ್ಹತೆ ಮತ್ತು ನೀರು ಸರಬರಾಜು ಕಂಪನಿಗಳು/ ಸಮಾಲೋಚನ ಏಜನ್ಸಿಗಳ ಕಿರುಪಟ್ಟಿ ತಯಾರಿಕೆಗೆ ಕೆಯುಐಡಿಎಫ್‌ಸಿಯು ಬಿಡ್‌ಗಳನ್ನು ಆಹ್ವಾನಿಸಿ, ಹುಬ್ಬಳ್ಳಿ-ಧಾರವಾಡ ನಗರಕ್ಕೆ ಯೋಜನೆಯನ್ನು ಕೈಗೆತ್ತಿಕೊಳ್ಳಲು ಎಲ್-1 ಬಿಡ್‌ದಾರರಿಗೆ ಗುತ್ತಿಗೆಯನ್ನು ನೀಡಲಾಗಿರುತ್ತದೆ. ಬೆಳಗಾವಿ ಮತ್ತು ಕಲಬುರಗಿ ನಗರಗಳಿಗೆ ಮೊದಲನೇ ಬಾರಿ ಆಹ್ವಾನಿಸಲಾಗಿದ್ದ ಬಿಡ್‌ಗೆ, ಬಿಡ್‌ದಾರರು ಸಲ್ಲಿಸಲಾದ ಬಿಡ್‌ಗಳನ್ನು ತುಲಾನಾತ್ಮಕವಾಗಿ ಪರಿಶೀಲಿಸಿದಾಗ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ನಮೂದಿಸಿದ್ದರಿಂದ ಬಿಡ್‌ಗಳನ್ನು ತಿರಸ್ಕರಿಸಲಾಗಿರುತ್ತದೆ.

1) ಹುಬ್ಬಳ್ಳಿ-ಧಾರವಾಡ:

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ದಿನಾಂಕ:26.10.2015ರ ನಡಾವಳಿ ಅನ್ವಯ ಹಾಗೂ ದಿನಾಂಕ: 09.12.2015 ರಂದು ನಡೆದ 4ನೇ ಅಧಿಕಾರಿಯುತ ಸಮಿತಿ ಸಭೆ, ದಿನಾಂಕ:18.02.2016 ಮತ್ತು 19.02.2016 ರಂದು ನಡೆದ 5ನೇ ಅಧಿಕಾರಿಯುತ ಸಮಿತಿ ಸಭೆಯಲ್ಲಿ "ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಪರಿಣಾಮಕಾರಿ ವೆಚ್ಚದಲ್ಲಿ ಮತ್ತು ಒತ್ತಡ ಸಹಿತ ನಿರಂತರ ನೀರು ಸರಬರಾಜಿನ ಉನ್ನತೀಕರಣ, ಕಾರ್ಯಾಚರಣೆ ಮತ್ತು ನಿರ್ವಹಣೆಯ" ಆಪರೇಟರ್ ಸೇವೆಯನ್ನು ದಿನಾಂಕ:20.02.2016 ರಂದು ಎಲ್1 ಬಿಡ್‌ದಾರರಾದ M/s Ranhill Utilities Sdn Bhd (Malaysia) with Z & A P. Antonaropoulos S.A. (Greece) IL&FS Water Ltd. (India) Joint Venture (JV) Consortium ರವರಿಗೆ ರೂ.252.00 ಕೋಟಿ (-)34%, ಗುತ್ತಿಗೆ ಮೊತ್ತಕ್ಕೆ ಗುತ್ತಿಗೆಯನ್ನು ನೀಡಲು ಅನುಮೋದನೆ ನೀಡಲಾಗಿರುತ್ತದೆ.



Scanned with CamScanner

ಅದರಂತೆ, ದಿನಾಂಕ:14.05.2016 ರಂದು ಗುತ್ತಿಗೆ ಕರಾರಿಗೆ ಸಹಿ ಮಾಡಲಾಗಿದ್ದು, ಯೋಜನೆಯ ಕಾರ್ಯಾರಂಭ ದಿನಾಂಕ:15.05.2016 ಆಗಿರುತ್ತದೆ.

(ರೂ. ಕೋಟಿಗಳಲ್ಲಿ)

| ಯೋಜನೆಯ ಹಂತ | ಅವಧಿ | ಚಟುವಟಿಕೆಗಳು | ಆಪರೇಟರ್ ನಮೂದಿಸಿದ ಮೊತ್ತ |
|---|---|---|---|
| ಪ್ರಾರಂಭಿಕ ಅವಧಿ (Start Up Period) | 1 ವರ್ಷ | ಸೇವಾ ಸುಧಾರಣಾ ಯೋಜನೆ ತಯಾರಿ (SIP)ಮತ್ತು ಪರಿವರ್ತನಾ ಹಸ್ತಾಂತರ ಯೋಜನೆ (THP). | 30.12 |
| ಪರಿವರ್ತನಾ ಅವಧಿ (Transition Period) | 3 ವರ್ಷ | ಸೇವಾ ಸುಧಾರಣಾ ಯೋಜನೆಯ ಅನುಷ್ಠಾನಕ್ಕೆ ಸಂಗ್ರಹಣೆ ಮತ್ತು ಯೋಜನಾ ನಿರ್ವಹಣೆ. ಮೈಲುಗಲ್ಲು / ಕಾರ್ಯಕ್ಷಮತೆ ಆಧಾರಿತ ಮಾನದಂಡಗಳ ಅನ್ವಯ ನೀರು ಸರಬರಾಜು ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ. | 67.41 |
| ಸುಸ್ಥಿರ (ನಿರಂತರ) ಅವಧಿ (Transition Period) | 8 ವರ್ಷ | ಕಾರ್ಯಕ್ಷಮತೆ ಆಧಾರಿತ ಮಾನದಂಡಗಳ ಅನ್ವಯ ನೀರು ಸರಬರಾಜು ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ. | 154.49 |

ಗುತ್ತಿಗೆ ಕರಾರಿನನ್ವಯ, ಆಪರೇಟರ್ ಕರಡು ಸೇವಾ ಸುಧಾರಣಾ ಯೋಜನೆಯನ್ನು (SIP) ಯೋಜನೆಯ ಪ್ರಾರಂಭಿಕ ಅವಧಿಯ ದಿನಾಂಕ: 14.05.2017 ಕ್ಕೆ ಪೂರ್ಣಗೊಳ್ಳಬೇಕಾಗಿದ್ದು, ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ದಿನಾಂಕ: 15.05.2017 ರಂದು ವಹಿಸಿಕೊಳ್ಳಬೇಕಾಗಿತ್ತು. ಆದರೆ, ಕಾರಣಾಂತರಗಳಿಂದ ದಿನಾಂಕ:06.05.2017 ರಂದು ನಡೆದ 8ನೇ ಅಧಿಕಾರಯುತ ಸಮಿತಿ ಸಭೆಯು ಹಸ್ತಾಂತರದ ಅವಧಿಯನ್ನು ದಿನಾಂಕ: 18.08.2017 ರವರೆಗೆ ವಿಸ್ತರಿಸಲು ಅನುಮೋದನೆ ನೀಡಿರುತ್ತದೆ. ಆಪರೇಟರ್‌ರವರ ಮನವಿ ಮತ್ತು ಆಗಸ್ಟ್-2017 ರಲ್ಲಿ ನಡೆದ ಚರ್ಚೆಗಳನ್ವಯ ದಿನಾಂಕ:17.08.2017 ರಂದು ನಡೆದ 10ನೇ ಅಧಿಕಾರಯುತ ಸಮಿತಿಯು ಪರಿವರ್ತನಾ ಅವಧಿ (Transition period) ಯನ್ನು ದಿನಾಂಕ:15.12.2017 ರವರೆಗೆ ವಿಸ್ತರಿಸಲು ಅನುಮೋದನೆ ನೀಡಿರುತ್ತದೆ.

ಆಪರೇಟರ್ ಸೇವಾ ಸುಧಾರಣಾ ಯೋಜನೆ ಸಲ್ಲಿಸುವಲ್ಲಿ ಮತ್ತು ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ವಹಿಸಿಕೊಳ್ಳುವಲ್ಲಿ ವಿಳಂಬ ಮಾಡಿರುವುದಕ್ಕಾಗಿ Notice of Correction for Failure ನ್ನು ನೀಡಲು ದಿನಾಂಕ: 07.06.2017 ರಂದು ನಡೆದ 9ನೇ ಅಧಿಕಾರಯುತ ಸಮಿತಿ ಸಭೆಯ ತೀರ್ಮಾನದಂತೆ ದಿನಾಂಕ:7.9.2017 ರಂದು Notice to Correct ನ್ನು ನೀಡಲಾಗಿರುತ್ತದೆ. ಈ ಮಧ್ಯೆ ಆಪರೇಟರ್ ನಗರದ ನಾಗರೀಕ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ತಂದು ಮತ್ತು ಮಧ್ಯಂತರ ಪರಿಹಾರಕ್ಕೆ ಮಧ್ಯಸ್ಥಿಕೆದಾರರ (Arbitration Tribunal) ನ್ಯಾಯಮಂಡಳಿಯಲ್ಲಿ ಕೋರಿಕೆ ಸಲ್ಲಿಸಿರುತ್ತಾರೆ.

ಯೋಜನೆಯಡಿ ನಿರೀಕ್ಷಿತ ಪ್ರಗತಿಯಾಗದೇ ಇರುವುದರಿಂದ, ವಿಶ್ವಬ್ಯಾಂಕ್ ಈ ಯೋಜನೆಯನ್ನು ಅತೃಪ್ತಿಕರ ಕಾರ್ಯನಿರ್ವಹಣೆ (Un-satisfactory) ಸ್ಥಾನಕ್ಕೆ ಇಳಿಸಿರುತ್ತದೆ (Downgraded). ಈ ಯೋಜನೆಯ ರಚನೆಯಲ್ಲಿ ಉಲ್ಲೇಖಿಸಿರುವ ಕ್ಲಿಷ್ಟಕರ (complex) ನಿಯಮಗಳು ಮತ್ತು ಷರತ್ತುಗಳಿಂದಾಗಿ ಯೋಜನೆಯ ಸ್ಥಿತಿ ಈ ಮಟ್ಟಕ್ಕೆ ಬರಲು ಕಾರಣವೆಂದು ಅಭಿಪ್ರಾಯಪಟ್ಟಿರುವುದರಿಂದ, ದಿನಾಂಕ:29.05.2018 ರಂದು ನಡೆದ 15ನೇ ಅಧಿಕಾರಯುತ ಸಮಿತಿಯು ಯೋಜನೆಯ ಅನುಷ್ಠಾನಕ್ಕೆ ಪರ್ಯಾಯ ಗುತ್ತಿಗೆ ಮಾದರಿಯಾದ Design-Built-Operate-Transfer (DBOT) ಪ್ರಸ್ತಾಪಿಸಲು ಅನುಮೋದನೆ ನೀಡಿರುತ್ತದೆ.



Scanned with CamScanner

ಹುಬ್ಬಳ್ಳಿ-ಧಾರವಾಡ ಆಪರೇಟರ್ ಸೇವಾ ಗುತ್ತಿಗೆಯನ್ನು ರದ್ದುಗೊಳಿಸುವುದು:

ಕೆಯುಐಡಿಎಫ್‌ಸಿ/ಹೆಚ್‌ಡಿಎಮ್‌ಸಿಯ ಸಂಪೂರ್ಣ ಸಹಕಾರದ ಜೊತೆಗಾಗಿಯೂ, ಆಪರೇಟರ್ ಗುತ್ತಿಗೆಯ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ವಿಫಲವಾದ್ದರಿಂದ ಹಾಗೂ ಆಪರೇಟರ್ ಸಲ್ಲಿಸಿದ ವರದಿಗಳಲ್ಲಿ ಅಸ್ಥಿರತೆ ಇದ್ದ ಕಾರಣ ಲಭ್ಯವಿದ್ದ ಎಲ್ಲಾ ಆಯ್ಕೆಗಳನ್ನು ಗಮನಿಸಿ, ಹಣಕಾಸಿನ ಪರಿಣಾಮಗಳನ್ನು ಅನ್ವೇಷಿಸಿ, ದಿನಾಂಕ 4.8.2018 ರಂದು ನಡೆದ ಅಧಿಕಾರಯುತ ಸಮಿತಿ ಸಭೆಯಲ್ಲಿ ಗುತ್ತಿಗೆಯನ್ನು ಆಪರೇಟರ್ ರವರ risk and cost ನಲ್ಲಿ ರದ್ದುಗೊಳಿಸಲು ತೀರ್ಮಾನಿಸಿ ಸೂಕ್ತ ಪರ್ಯಾಯ ಪ್ರಸ್ತಾವನೆಯನ್ನು ಮಂಡಿಸಲು ಅನುಮೋದನೆ ನೀಡಲಾಗಿರುತ್ತದೆ.

ಸರ್ಕಾರದ ಆದೇಶದ ಪ್ರಕಾರ ಹುಬ್ಬಳ್ಳಿ-ಧಾರವಾಡ ನೀರು ಸರಬರಾಜು ಯೋಜನೆಗೆ ರೂ.763 ಕೋಟಿಗಳನ್ನು ಮಂಜೂರು ಮಾಡಲಾಗಿದೆ. ಆಪರೇಟರ್‌ರವರು ಟೆಂಡರ್‌ನಲ್ಲಿ ಉಲ್ಲೇಖಿಸಲಾದ ರೂ.252 ಕೋಟಿ + ಕಾಮಗಾರಿಗಳ ನಿರ್ವಹಣೆಗಾಗಿ (ಕ್ಯಾಪೆಕ್ಸ್) ರೂ. 709 ಕೋಟಿಗಳು = ಒಟ್ಟು ರೂ.961.004 ಕೋಟಿ ಮೊತ್ತದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿತ್ತು. ಅಂದಾಜು ಮೊತ್ತವನ್ನು ವಾರ್ಷಿಕ 7% ಹೆಚ್ಚಳ ಮಾಡಿ 2018-19 ಕ್ಕೆ ನವೀಕರಿಸಿದರೆ ಅಂದಾಜು ಮೊತ್ತವು ರೂ.1,323 ಕೋಟಿ ಆಗಬಹುದೆಂದು ಅಂದಾಜಿಸಲಾಗಿದೆ. (2016 ವರ್ಷದ ಅನ್ವಯ ಇದರಲ್ಲಿ ರೂ.384 ಕೋಟಿ ಆಪರೇಟರ್ ವೆಚ್ಚ + ರೂ.709.00 ಕೋಟಿ ಬಂಡವಾಳ ವೆಚ್ಚ (capex) = ರೂ.1093 ಕೋಟಿ ಒಳಗೊಂಡಿದೆ). ಹಾಲಿ ಚಾಲ್ತಿಯಲ್ಲಿರುವ ಗುತ್ತಿಗೆಯನ್ನು ರದ್ದುಪಡಿಸುವ ಹಿನ್ನೆಲೆಯಲ್ಲಿ, ಪ್ರಸಕ್ತ ಅನುಮೋದಿತ ಯೋಜನಾ ವೆಚ್ಚವು ರೂ.362.00 ಕೋಟಿ ಹೆಚ್ಚುವರಿಯಾಗುವುದೆಂದು ಅಂದಾಜಿಸಲಾಗಿದೆ. (ಪ್ರಸಕ್ತ ಅಂದಾಜಿನ ಮೊತ್ತ ರೂ.1323 ಕೋಟಿ – ರೂ.961 ಕೋಟಿ ಗುತ್ತಿಗೆ ಮೊತ್ತ = ರೂ. 362 ಕೋಟಿ).

ಕಾಮಗಾರಿಯನ್ನು ಕೈಗೊಳ್ಳಲು ಬಿಡ್ ಆಹ್ವಾನಿಸಿ ಬಿಡ್ ಮೌಲ್ಯಮಾಪನ ಪ್ರಕ್ರಿಯೆಯನ್ನು ಅಂತಿಮಗೊಳಿಸಿದ ನಂತರವೇ ಅಗತ್ಯವಿರುವ ಹೆಚ್ಚುವರಿ ಮೊತ್ತದ ಅಂದಾಜು ನಿಖರವಾಗಿ ತಿಳಿದು ಬರುತ್ತದೆ. ತದನಂತರ, ಅಗತ್ಯವಿರುವ ಹೆಚ್ಚುವರಿ ಯೋಜನಾ ಮೊತ್ತವನ್ನು ವಿಶ್ವ ಬ್ಯಾಂಕ್‌ನಿಂದ ಕೋರಲು ಕ್ರಮ ಕೈಗೊಳ್ಳುವುದು.

2) ಬೆಳಗಾವಿ ಮತ್ತು ಕಲಬುರಗಿ ನಗರಗಳಲ್ಲಿ DBOT ಮಾದರಿಯ ಪುನರ್‌ರಚನೆ:

ಬೆಳಗಾವಿ ಮತ್ತು ಕಲಬುರಗಿ ನಗರಗಳಿಗೆ ಮೊದಲನೇ ಬಾರಿ ಬಿಡ್‌ಗಳನ್ನು ತಿರಸ್ಕರಿಸಲಾಗಿದ್ದು, 2ನೇ ಬಾರಿ ಯಾವುದೇ ಬಿಡ್‌ದಾರರು ಭಾಗವಹಿಸದೇ ಇದ್ದುದರಿಂದ ಪರಿಷ್ಕೃತ DBOT ಮಾದರಿಯನ್ನು ಅಳವಡಿಸಲು ದಿನಾಂಕ:29.05.2018 ರಂದು ನಡೆದ 15ನೇ ಅಧಿಕಾರಯುತ ಸಮಿತಿಯು ವಿಶ್ವಬ್ಯಾಂಕಿನ ಸಮಾಲೋಚನೆಯೊಂದಿಗೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿರುತ್ತದೆ.

ಬೆಳಗಾವಿ ಮತ್ತು ಕಲಬುರಗಿ ನಗರಗಳ ಹಣಕಾಸಿನ ಪರಿಣಾಮಗಳನ್ನು ಬಿಡ್‌ಗಳು ಸ್ವೀಕೃತವಾದ ನಂತರ ಅಂದಾಜಿಸಿ ಮುಂದಿನ ಕ್ರಮ ಕೈಗೊಳ್ಳುವುದು.

ಪ್ರಸ್ತಾವಿತ ಯೋಜನೆಯ DBOT ಮಾದರಿಯಲ್ಲಿ ಒಳಗೊಂಡಿರುವ ಅಂಶಗಳು:

I. ಪ್ರಸ್ತಾವಿತ ಗುತ್ತಿಗೆ ರಚನೆಯನ್ನು 12 ವರ್ಷಗಳಿಗೆ ಸೀಮಿತಗೊಳಿಸಿದ್ದು, ಒಂದು ವರ್ಷದ ಅವಧಿಯಲ್ಲಿ ವಿನ್ಯಾಸ ಮತ್ತು ಪ್ರಸ್ತುತ ನೀರು ಸರಬರಾಜು ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವುದರ ಜೊತೆಗೆ 6 ತಿಂಗಳ ಬಳಿಕ ಹಾಲಿ ಚಾಲ್ತಿಯಲ್ಲಿರುವ ನಗರ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವುದು; ಗರಿಷ್ಠ 4 ವರ್ಷ ಯೋಜನಾ ಅನುಷ್ಠಾನ ಜೊತೆಗೆ 18 ತಿಂಗಳ ಬಳಿಕ ಹಾಲಿ ಚಾಲ್ತಿಯಲ್ಲಿರುವ ವಿತರಣಾ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವುದು; ಅನುಷ್ಠಾನಿಸಲಾಗಿರುವ 24/7 ನೀರು ಸರಬರಾಜು ವ್ಯವಸ್ಥೆಯಯನ್ನು ಕಾರ್ಯಾರಂಭಗೊಳಿಸುವುದರೊಂದಿಗೆ 7 ವರ್ಷಗಳ ಅವಧಿಗೆ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವುದು.



Scanned with CamScanner

II. ಪ್ರಸ್ತುತ ನೀರು ಸರಬರಾಜು ವ್ಯವಸ್ಥೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಮಹಾನಗರ ಪಾಲಿಕೆ- ಕೆ.ಯು.ಐ.ಡಿ.ಎಫ್.ಸಿ, ಕೆ.ಯು.ಡಬ್ಲ್ಯೂ.ಎಸ್.ಡಿ.ಬಿ ಮತ್ತು ಆಪರೇಟರ್ ಇವರ ಜಂಟಿ ಕಾರ್ಯಾಚರಣೆಯನ್ನು ಕಡ್ಡಾಯಗೊಳಿಸುವುದು.

III. ಬಿಡ್ ದಸ್ತಾವೇಜನ್ನು ಕಾಮಗಾರಿ ಪರಿಮಾಣ ಮತ್ತು ವಿವಿಧ ಕಾಂಪೋನೆಂಟ್‌ಗಳ ಆಧಾರಿಸಿ ತಯಾರಿಸಲಾಗುವುದು.

IV. ಉತ್ತಮ ಸ್ಪರ್ಧೆಗಾಗಿ ಮತ್ತು ಭಾರತೀಯ ಕಂಪನಿಗಳು ಸ್ವತಂತ್ರವಾಗಿ ಸದರಿ ಬಿಡ್‌ಗಳಲ್ಲಿ ಪಾಲ್ಗೊಳ್ಳುವುದನ್ನು ಉತ್ತೇಜಿಸಲು ಬಿಡ್‌ಗಳ ತಾಂತ್ರಿಕ ಅರ್ಹತೆ ಮತ್ತು ಹಣಕಾಸಿನ ಸಾಮರ್ಥ್ಯಗಳಲ್ಲಿ ಮಾನದಂಡಗಳನ್ನು /ವಿಧಾನಗಳನ್ನು ಪರಿಷ್ಕರಿಸುವುದು (ಮಾತೃ ಸಂಸ್ಥೆ ಗ್ಯಾರೆಂಟಿ ಪಡೆಯುವ ಷರತ್ತನ್ನು ಕೈಬಿಡಲಾಗಿರುತ್ತದೆ,

V. ಯಶಸ್ವಿಯಾಗಿ ನಿರ್ವಹಿಸಿದ ಕಾರ್ಯಾಚರಣೆ ಮತ್ತು ನಿರ್ವಹಣೆಯ ಸಂಪೂರ್ಣ ವ್ಯವಸ್ಥೆಯನ್ನು ಅಗತ್ಯ ತರಬೇತಿಯೊಂದಿಗೆ ಸ್ಥಳೀಯ ಸಂಸ್ಥೆಗೆ ವರ್ಗಾಯಿಸುವುದು.

ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ, ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಆರ್ಥಿಕ ಇಲಾಖೆ ಹಾಗೂ ಕಾನೂನು ಇಲಾಖೆಯ ಅಭಿಪ್ರಾಯದನ್ವಯ ಈ ಕೆಳಕಂಡಂತೆ ಆದೇಶಿಸಿದೆ:

**ಸರ್ಕಾರದ ಆದೇಶ ಸಂಖ್ಯೆ ನಅಇ 279 ಡಿಆರ್‌ಜೆ 2018,**

**ಬೆಂಗಳೂರು ದಿನಾಂಕ:22-10-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಹುಬ್ಬಳ್ಳಿ-ಧಾರವಾಡ ನಗರದ ಸಾರ್ವಜನಿಕರಿಗೆ 24/7 ನಿರಂತರ ನೀರು ಸರಬರಾಜನ್ನು ಪೂರೈಸುವ ಬದ್ಧತೆಯನ್ನು ಗಮನದಲ್ಲಿರಿಸಿ (ಮೀರಿರುವ ಸಮಯ ಮತ್ತು ವೆಚ್ಚವನ್ನು ಒಳಗೊಂಡಂತೆ) ಯೋಜನೆಯ 16ನೇ ಅಧಿಕಾರಯುತ ಸಮಿತಿ ಸಭೆಯು, ಅಸ್ತಿತ್ವದಲ್ಲಿರುವ ಗುತ್ತಿಗೆಯನ್ನು ರದ್ದುಗೊಳಿಸಲು ಮತ್ತು ಪರ್ಯಾಯ ಪ್ರಸ್ತಾವನೆಯನ್ನು ಮಂಡಿಸಲು ತೀರ್ಮಾನಿಸಿರುವಂತೆ ಕ್ರಮ ಕೈಗೊಳ್ಳಲು ಹಾಗೂ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ನಗರಗಳಿಗೆ ಗುತ್ತಿಗೆ ಮಾದರಿಯನ್ನು ಮಾರ್ಪಡಿಸಿ DBOT ಮಾದರಿಯಲ್ಲಿ ಟೆಂಡರ್ ಆಹ್ವಾನಿಸಲು ಕೆ.ಯು.ಐ.ಡಿ.ಎಫ್.ಸಿ ಸಂಸ್ಥೆಗೆ ಈ ಕೆಳಕಂಡಂತೆ ಅನುಮೋದನೆ ನೀಡಲಾಗಿದೆ:

(i) ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ಯೋಜನೆಗೆ ಒತ್ತಡ ಸಹಿತ ನಿರಂತರ 24/7 ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲು ಈ ಹಿಂದೆ ಹೊರಡಿಸಲಾಗಿರುವ ಸರ್ಕಾರಿ ಆದೇಶ ಸಂಖ್ಯೆ: ನಅಇ 244 ಡಿಆರ್‌ಜೆ 2013, ದಿನಾಂಕ:07-11-2013ನ್ನು ಪರಿಷ್ಕರಿಸಿ Design-Built-Operate-Transfer (DBOT) ಮಾದರಿ ಅಳವಡಿಸುವುದು.

(ii) ಈಗಾಗಲೇ, ವಿಶ್ವಬ್ಯಾಂಕಿನಿಂದ ಮಂಜೂರಾದ ಸಾಲದ ಮೊತ್ತವನ್ನು ಹುಬ್ಬಳ್ಳಿ-ಧಾರವಾಡ ಸೇರಿದಂತೆ ಬೆಳಗಾವಿ ಮತ್ತು ಕಲಬುರಗಿ ಯೋಜನಾ ನಗರಗಳಿಗೆ ಬಳಸುವುದು.

(iii) ಈ ಯೋಜನೆಗೆ ಮಂಜೂರಾಗಿರುವ ಸಾಲಕ್ಕೆ ಅವಧಿ ವಿಸ್ತರಣೆಯೊಂದಿಗೆ ಅಗತ್ಯವಿರುವ ಹೆಚ್ಚುವರಿ ಸಾಲಕ್ಕೆ ವಿಶ್ವಬ್ಯಾಂಕಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.



Scanned with CamScanner

ಈ ಆದೇಶವನ್ನು ಸಚಿವ ಸಂಪುಟ ಪ್ರಕರಣ ಸಂಖ್ಯೆ. ಸಿ:614/2018 ದಿನಾಂಕ:04.10.2018 ರಂದು ನೀಡಿರುವ ಅನುಮೋದನೆ ಮೇರೆಗೆ ಹಾಗೂ ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಎಫ್.ಡಿ 596 ವೆಚ್ಚ-09/2018, ದಿನಾಂಕ:01.10.2018 ರಂದು ನೀಡಿರುವ ಅಭಿಪ್ರಾಯ ಹಾಗೂ ಕಾನೂನು ಇಲಾಖೆಯ ಅಭಿಪ್ರಾಯ ಸಂಖ್ಯೆ: ಲಾ/542/ಅಭಿಪ್ರಾಯ/2018, ದಿನಾಂಕ:24.09.2018 ರಂದು ನೀಡಿರುವ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಲಲಿತಾಬಾಯಿ. ಕೆ
(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಯೋ.ಮೇ.ಕೋ)
ನಗರಾಭಿವೃದ್ಧಿ ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸುವುದು.

ಇವರಿಗೆ:

1) ಮಹಾಲೇಖಪಾಲರು (ಲೆಕ್ಕಪತ್ರ)/ ಮಹಾಲೇಖಪಾಲರು (ಲೆಕ್ಕ ಪರಿಶೋಧನೆ ಮತ್ತು ಆಡಿಟ್), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, ಕೆಯುಡಬ್ಲ್ಯೂಎಸ್&ಡಿಬಿ, ಬೆಂಗಳೂರು.
8) ಜಿಲ್ಲಾಧಿಕಾರಿಗಳು, ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡ.
9) ಆಯುಕ್ತರು, ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ.
10) ಜಂಟಿ ನಿರ್ದೇಶಕರು (ಯೋಜನೆ), ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ.
11) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ ಶಾಖೆ) -ವಿಷಯ ಸಿ:614/2018 ದಿನಾಂಕ:04.10.2018 ರಲ್ಲಿ ಸಚಿವ ಸಂಪುಟ ಕೈಗೊಂಡ ನಿರ್ಣಯದನ್ವಯ ಮಾಹಿತಿಗಾಗಿ.
12) ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ, ವಿಧಾನ ಸೌಧ, ಬೆಂಗಳೂರು.
13) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.



Scanned with CamScanner